For more job news visit : www.kpscvaani.com

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ,
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ-562159.
E-mail: ka.ramanagara.dudc@gmail.com Website:
itstaff_dudc_ramanagara@yahoo.in Phone: 080-27274108 / 27276074

ಸಂ: ರಾಜಿನಕೋ/ಎಂಯುಎನ್ (2)ನೇ.ಪ.ನೇಮಕ/ಸಿಆರ್/462/2025-26 ದಿನಾಂಕ: 31.07.2026.

"ನೇರಪಾವತಿ ಪೌರಕಾರ್ಮಿಕರ ನೇಮಕಾತಿ ಅಧಿಸೂಚನೆ"

ವಿಷಯ: ಬೆಂಗಳೂರು ದಕ್ಷಿಣ ಜಿಲ್ಲೆಯ, ಕನಕಪುರ, ರಾಮನಗರ ಮತ್ತು ಚನ್ನಪಟ್ಟಣ ನಗರಸಭೆಗಳಲ್ಲಿ ನೇರಪಾವತಿಯಡಿ ಖಾಲಿ ಇರುವ ನೇರ ಪಾವತಿ ಪೌರಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಇವರ ಸುತ್ತೋಲೆ : 513641/DMA/EST2 /OTH /8/2021 20:18.11.2025

ಪೌರಸೇವಾ ವೃಂದ ಮತ್ತು ನೇಮಕಾತಿ ನಿಯಮ 2010 ರೀತ್ಯಾ ನಗರಸಭೆಗಳಲ್ಲಿ ಶೇ.50ರಷ್ಟು ಪೌರಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ಹಾಗೂ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರಪಾವತಿ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖಿತ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ ನಗರಸಭೆಯಲ್ಲಿ ನೇರಪಾವತಿಯಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಮೂಲಕ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

ಉಲ್ಲೇಖಿತ ಸುತ್ತೋಲೆಯಲ್ಲಿ ನೀಡಲಾದ ಮಾರ್ಗಸೂಚಿಗಳನ್ನು ಅನುಸರಿಸಿ ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆಗಳಲ್ಲಿ ಈ ಕೆಳಕಂಡ ಕೋಷ್ಠಕದಲ್ಲಿ ನಮೂದಿಸಿರುವಂತೆ ನೇರಪಾವತಿಯಡಿ ಇರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು, ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ದಿನಾಂಕ:03.08.2026 ರಿಂದ ದಿನಾಂಕ:05.09.2026 ರವರೆಗೆ, ಸಂಬಂಧಪಟ್ಟ ನಗರಸಭೆ ಕಛೇರಿಗಳಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು, ದಿನಾಂಕ: 05.09.2026 ರ ಸಂಜೆ 5.00 ಗಂಟೆಯೊಳಗೆ ಆಯಾ ನಗರಸಭೆ ಕಛೇರಿಗೆ ಸಲ್ಲಿಸತಕ್ಕದ್ದು.

ಕ್ರ.ಸ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಭರ್ತಿ ಮಾಡುವ ಹುದ್ದೆಗಳ ಸಂಖ್ಯೆ
1	ರಾಮನಗರ ನಗರಸಭೆ	45
2	ಚನ್ನಪಟ್ಟಣ ನಗರಸಭೆ	36
3	ಕನಕಪುರ ನಗರಸಭೆ	21

ಅರ್ಜಿ ಸಲ್ಲಿಕೆ ವಿಧಾನ ಮತ್ತು ಸ್ವೀಕೃತಿ ಕಾಲಮಿತಿ:

ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ	03.08.2026
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ.	05.09.2026
ಅರ್ಜಿ ನಮೂನೆ ಪಡೆಯುವ ಹಾಗೂ ಭರ್ತಿ ಮಾಡಿದ ಅರ್ಜಿ & ದಾಖಲೆಗಳನ್ನು ಸಲ್ಲಿಸುವ ಸ್ಥಳ.	ರಾಮನಗರ, ಚನ್ನಪಟ್ಟಣ & ಕನಕಪುರ ನಗರಸಭೆ ಕಛೇರಿ ಅವಧಿಯಲ್ಲಿ

For more job news visit : www.kpscvaani.com

ವಯೋಮಿತಿ/ವಿದ್ಯಾರ್ಹತೆ:

1. ಕನಿಷ್ಠ 18 ವರ್ಷ, ಗರಿಷ್ಠ ವಯೋಮಿತಿ 50 ವರ್ಷದೊಳಗಿರಬೇಕು.
2. ವಿದ್ಯಾರ್ಹತೆ ಅನ್ವಯಿಸುವುದಿಲ್ಲ, ಆದರೆ ಕನ್ನಡ ಭಾಷೆಯಲ್ಲಿ ಮಾತನಾಡಲು ಬರಬೇಕು.

ಅರ್ಜಿ ಸಲ್ಲಿಸಲು ಅರ್ಹತಾ ಷರತ್ತುಗಳು:

ಅ. ಭಾರತೀಯ ನಾಗರಿಕನಾಗಿರತಕ್ಕದ್ದು

ಆ. ಈ ಸಾರ್ವಜನಿಕ ಪ್ರಕಟಣೆ ಪ್ರಕಟಗೊಂಡ ದಿನಾಂಕಕ್ಕೆ ಕನಿಷ್ಠ ವಯೋಮಿತಿ 18 ಗರಿಷ್ಠ ವಯೋಮಿತಿ ಪೂರ್ಣಗೊಳಿಸಿರಬೇಕು ಹಾಗೂ 50 ವರ್ಷಗಳ ವಯೋಮಿತಿ ಮೀರಿರಬಾರದು. ವಯೋಮಿತಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಜನನ ಪ್ರಮಾಣ ಪತ್ರ/ಶೈಕ್ಷಣಿಕ ದಾಖಲಾತಿಗಳು/ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಪಾನ್ ಕಾರ್ಡ್ ಮತ್ತು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ನಗರಸಭೆಯಲ್ಲಿ ESI, PF ನಲ್ಲಿ ನಮೂದಿಸಿರುವ ಜನ್ಮ ದಿನಾಂಕ ದಾಖಲೆಯನ್ನು ಪರಿಗಣಿಸಲಾಗುವುದು

ಇ. ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆಯಲ್ಲಿ ಈ ಹಿಂದೆ ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲಿನರ್ಸ್, ಹಾಗೂ ಹೆಲ್ಪರ್ಸ್ ಗಳಾಗಿ ಕಾರ್ಯನಿರ್ವಹಿಸುತ್ತಿರುವ/ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಕಾರ್ಯನಿರ್ವಹಿಸಿದ ಅವಧಿಗೆ ESI/PF/ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್, ಹಾಜರಾತಿ ದಾಖಲೆಗಳನ್ನು ಸಂಬಂಧಿಸಿದ ಪೌರಾಯುಕ್ತರಿಂದ ದೃಢೀಕರಿಸಿಕೊಂಡು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

ಈ. ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆಯಲ್ಲಿ ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರಕಾರ್ಮಿಕದ ಕುಟುಂಬದ ಒಬ್ಬ ಸದಸ್ಯರನ್ನು ನೇರ ಪಾವತಿಯಡಿ ನೇಮಕ ಮಾಡಲು ಪರಿಗಣಿಸಲಾಗುವುದು.

ಉ. ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲಿನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸಿ ಅನುಭವವುಳ್ಳ ಸ್ಥಳೀಯ ಸ್ವಚ್ಛತಾ ಕೆಲಸಗಾರರನ್ನು ಪರಿಗಣಿಸಲಾಗುವುದು. ಕಾರ್ಯನಿರ್ವಹಿಸಿದ ಅವಧಿಯ ESI/PF/ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಮತ್ತು ಹಾಜರಾತಿ ದಾಖಲೆಗಳನ್ನು ಸಂಬಂಧಿಸಿದ ಪೌರಾಯುಕ್ತರಿಂದ ದೃಢೀಕರಿಸಿಕೊಂಡು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

ಊ. ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ತರುಗಳಿಗೆ ಅಥವಾ ಅವರ ಕುಟುಂಬದ ಸದಸ್ಯರಾಗಿರಬೇಕು (ಗಂಡ, ಹೆಂಡತಿ, ಮಗ/ಮಗಳು).

ಋ. ಕನ್ನಡ ಭಾಷೆ ಮಾತನಾಡುವ ಬಗ್ಗೆ ಜ್ಞಾನವಿರಬೇಕು. (ಕನ್ನಡ ಜ್ಞಾನದ ಬಗ್ಗೆ ಸ್ವಯಂ ಘೋಷಣಾ ಪತ್ರ ಲಗತ್ತಿಸಬೇಕು)

ಎ. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಆಯಾ ನಗರಸಭೆಗಳಲ್ಲಿ ಮಾತ್ರ ನೇಮಕಾತಿಗೆ ಅರ್ಜಿ ಸಲ್ಲಿಸುವುದು.

For more job news visit : www.kpscvaani.com

ನೇಮಕಾತಿ ವಿಧಾನ:

ಅ. ನೇರ ಪಾವತಿಯಡಿ ನೇಮಕಾತಿ ಮಾಡಿಕೊಳ್ಳುವ ಪದ್ಧತಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ(ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮದಲ್ಲಿ ಉಲ್ಲೇಖಿಸಿರುವುದಿಲ್ಲ. ಆದ ಕಾರಣ ನೇರಪಾವತಿ ನೇಮಕಾತಿ ಪ್ರಕ್ರಿಯೆಯು ಸದರಿ ಅಧಿನಿಯಮಕ್ಕೆ ಒಳಪಟ್ಟಿರುವುದಿಲ್ಲ ಮತ್ತು ಮೀಸಲಾತಿ ಅನ್ವಯಿಸುವುದಿಲ್ಲ.

ಆ. ಸದರಿ ನೇರಪಾವತಿ ಪೌರಕಾರ್ಮಿಕರ ಹುದ್ದೆಗಳ ನೇಮಕಾತಿಯು ಸರ್ಕಾರ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸುತ್ತೋಲೆಗಳು, ಆದೇಶಗಳು ಮತ್ತು ನಿರ್ದೇಶನಗಳು ಹಾಗೂ ನೇಮಕಾತಿ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ನೇಮಕಾತಿ ಷರತ್ತುಗಳು:

1. ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯನ್ವಯ ವೇತನ ನಿಗಧಿಪಡಿಸಲಾಗುವುದು ಹಾಗೂ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ಪರಿಷ್ಕರಿಸುವ ವೇತನವನ್ನು ಮತ್ತು ಪಿಎಫ್ ಮತ್ತು ಇ.ಎಸ್.ಐ ಸೌಲಭ್ಯವನ್ನು ಕಲ್ಪಿಸಲಾಗುವುದು.

2. ನೇರ ಪಾವತಿಯಡಿ ಆಯ್ಕೆಗೊಂಡ ಪೌರಕಾರ್ಮಿಕರು ತಾತ್ಕಾಲಿಕವಾಗಿದ್ದು ಖಾಯಂ ನೌಕರರಿಗೆ ನೀಡುವಂತಹ ಇತರೆ ಯಾವುದೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ ಮತ್ತು ವ್ಯಕ್ತಿಗತವಾಗಿ ಅಥವಾ ಸಂಘಗಳನ್ನು ಸ್ಥಾಪಿಸಿಕೊಂಡು ಖಾಯಂ ಮಾಡುವಂತೆ ಒತ್ತಾಯಿಸುವಂತಿಲ್ಲ ಹಾಗೂ ಖಾಯಂ ಮಾಡುವಂತೆ ಯಾವುದೇ ನ್ಯಾಯಾಲಯದ ಮೊರೆ ಹೋಗುವುದಕ್ಕೆ ಆಸ್ಪದವಿರುವುದಿಲ್ಲ. (ಈ ಕುರಿತು ಅಂತಿಮವಾಗಿ ಆಯ್ಕೆಗೊಂಡ ಅಭ್ಯರ್ಥಿಗಳು ನೋಟರಿ ಪ್ರಮಾಣ ಪತ್ರ ಕಡ್ಡಾಯವಾಗಿ ನೀಡತಕ್ಕದ್ದು)

3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು. (ಈ ಕುರಿತು ಸರ್ಕಾರಿ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.)

4. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ಸರ್ಕಾರಿ ವೈದ್ಯಾಧಿಕಾರಿಗಳ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಆಯ್ಕೆ ಸಮಿತಿ ಕಾಯ್ದಿರಿಸಿಕೊಂಡಿದೆ.

5. ನೇರಪಾವತಿಯಡಿ ಆಯ್ಕೆ ಹೊಂದುವವರು ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಮೃತರಾದಲ್ಲಿ ಅನುಕಂಪ ನೇಮಕಾತಿ ಪಿಂಚಣಿ ಉಪದಾನ ಇತ್ಯಾದಿ ಯಾವುದೇ ಸೇವಾ/ಆರ್ಥಿಕ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.

6. ನೇರ ಪಾವತಿ ಅಡಿ ಆಯ್ಕೆ ಹೊಂದುವ ಪೌರಕಾರ್ಮಿಕರು ಸ್ವಚ್ಛತಾ ಕೆಲಸವನ್ನೇ ನಿರ್ವಹಿಸಬೇಕು ಅದಲ್ಲದೆ ಇತರೆ ಯಾವುದೇ ಕೆಲಸಕ್ಕೆ ಅಥವಾ ಕಚೇರಿ ಕೆಲಸಗಳಿಗೆ ನಿಯೋಜಿಸುವಂತೆ ಕೋರುವಂತಿಲ್ಲ.

7. ನೇರ ಪಾವತಿಯಡಿ ಆಯ್ಕೆಗೊಂಡವರುಗಳ ಹೊರತು ಸದರಿಯವರ ಹೆಸರಿನಲ್ಲಿ ಯಾವುದೇ ಸಂದರ್ಭದಲ್ಲಿಯೂ ಬೇರೊಬ್ಬರು ಕರ್ತವ್ಯ ನಿರ್ವಹಿಸುವಂತಿಲ್ಲ.

For more job news visit : www.kpscvaani.com

8. ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ವಾಸ್ತವಿಕ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಮಾಹಿತಿಯನ್ನು ಮರೆಮಾಚಿರುವನೆಂದು, ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದಾದಲ್ಲಿ, ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದಲ್ಲಿ ಅಥವಾ ಕಛೇರಿ ಮುಖ್ಯಸ್ಥರು ನೀಡುವ ಸೂಚನೆ ಮತ್ತು ಸಲಹೆಗಳನ್ನು ಪಾಲಿಸದೆ ಇದ್ದಲ್ಲಿ ಸಂಬಂಧಿಸಿದ ಪೌರಾಯುಕ್ತರ/ಮುಖ್ಯಾಧಿಕಾರಿಗಳ ಮುಖಾಂತರ ಯಾವುದೇ ಮುನ್ಸೂಚನೆ ನೀಡದೆ ಸದರಿಯವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಸೂಕ್ತ ಕಾನೂನು ರೀತ್ಯಾ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು

8. ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು.

9. ಈಗಾಗಲೇ ಯಾವುದೇ ಶಿಸ್ತುಕ್ರಮಕ್ಕೆ ಒಳಗಾಗಿ ಸೇವೆಯಿಂದ ವಜಾಗೊಂಡಿರಬಾರದು ಹಾಗೂ ಸೇವೆಯಲ್ಲಿ ಪದೇ ಪದೇ ಗೈರು ಹಾಜರಾಗಿರಬಾರದು.

10. ಪೌರಕಾರ್ಮಿಕರ ನೇರ ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಬದಲಾವಣೆ ಹಾಗೂ ರದ್ದುಪಡಿಸುವಿಕೆಯ ಸಂಪೂರ್ಣ ಅಧಿಕಾರವನ್ನು ನೇಮಕಾತಿಯ ಆಯ್ಕೆ ಸಮಿತಿ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಈ ಸಾರ್ವಜನಿಕ ಪ್ರಕಟಣೆಯನ್ನಯ ಅಧಿಕೃತ ವೆಬ್‌ಸೈಟ್ **www.ramanagaradudc.mrc.gov.in** & **https://bengalurusouth.nic.in** ನಲ್ಲಿ ಪ್ರಚುರಪಡಿಸಲಾಗಿದೆ.

ಅಧ್ಯಕ್ಷರು,
ನೇರಪಾವತಿ ಪೌರಕಾರ್ಮಿಕರ ನೇಮಕಾತಿ ಆಯ್ಕೆ ಸಮಿತಿ ಹಾಗೂ ಜಿಲ್ಲಾಧಿಕಾರಿಗಳು,
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.

For more job news visit : www.kpscvaani.com

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ,
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ-562159.
ನೇರಪಾವತಿ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡುವ ಅರ್ಜಿ ನಮೂನೆ.

ಇತ್ತೀಚೀನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಪೌರಾಯುಕ್ತರು ದೃಢೀಕರಿಸುದು.

1	ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರದಲ್ಲಿ)	
2	ತಂದೆ / ಗಂಡನ ಹೆಸರು	
3	ತಾಯಿ ಹೆಸರು	
4	ಖಾಯಂ ಅಂಚೆ ವಿಳಾಸ :	
5	ದೂರವಾಣಿ ಸಂಖ್ಯೆ:	
6	ಜನ್ಮ ದಿನಾಂಕ / ವಯಸ್ಸು	
7	ವಯಸ್ಸಿಗೆ ಸಂಬಂಧಪಟ್ಟಂತೆ ಅಧಿಕೃತ ದಾಖಲಾತಿಗಳು ಜನನ ಪ್ರಮಾಣ ಪತ್ರ/ ಆಧಾರ್‌ಕಾರ್ಡ್/ಮತದಾರರ ಗುರುತಿನ ಚೀಟಿ/ ಶೈಕ್ಷಣಿಕ ದಾಖಲಾತಿಗಳು	
8	ಲಿಂಗ (ಪುರುಷ / ಮಹಿಳೆ / ತೃತೀಯ)	
9	ರಾಷ್ಟ್ರೀಯತೆ ಮತ್ತು ಧರ್ಮ	
10	ವಿವಾಹಿತರೇ (ಹೌದು ಅಥವಾ ಇಲ್ಲ)	
11	ಕನ್ನಡ ಮಾತನಾಡಲು ಬರುವುದೇ (ಹೌದು ಅಥವಾ ಇಲ್ಲ) ಸ್ವಯಂ ಘೋಷಣಾ ಪತ್ರ ಲಗತ್ತಿಸುವುದು.	
12	ಗುರುತಿನ ಚೀಟಿ (ಆಧಾರ್/ಚುನಾವಣಾ/ಪ್ಯಾನ್ ಕಾರ್ಡ್) ಲಗತ್ತಿಸುವುದು.	
13	ದೈಹಿಕವಾಗಿ ಹಾಗೂ ಮಾನಸಿಕವಾಗಿ ಅರ್ಹರಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ (ಸರ್ಕಾರಿ ಜಿಲ್ಲಾ ವೈಧ್ಯಾಧಿಕಾರಿಗಳಿಂದ ಪಡೆದಿರುವುದು)	
14	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಧಾನ ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ.	
15	ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲಿನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಸ್ವಚ್ಛತಾ ಕೆಲಸಗಾರರಾಗಿ ಕನಿಷ್ಠ ಒಂದು ವರ್ಷ ಮೇಲ್ಕಂಡ ಯಾವ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತೀರಿ.	

For more job news visit : www.kpscvaani.com

16	ಹಾಲಿ ಕಾರ್ಯನಿರ್ವಹಿಸುತ್ತಿರುವ / ಕಾರ್ಯನಿರ್ವಹಿಸಿದ್ದ ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲಿನರ್ಸ್, ಹಾಗೂ ಹೆಲ್ಪರ್ಸ್ ಗಳಾಗಿ ಕಾರ್ಯನಿರ್ವಹಿಸಿದ ಅವಧಿಯ ESI/PF & ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್, ಹಾಜರಾತಿ ದಾಖಲೆಗಳನ್ನು ಸಂಬಂಧಿಸಿದ ಪೌರಾಯುಕ್ತರಿಂದ ದೃಢೀಕರಿಸಿಕೊಂಡು ಅರ್ಜಿಯೊಂದಿಗೆ ಸಲ್ಲಿಸಿದೆ. (ಹೌದು/ಇಲ್ಲ)	
17	ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19ರ ಸಾಂಕ್ರಾಮಿಕ ರೋಗಕ್ಕೆ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬದ ಸದಸ್ಯರಾಗಿದ್ದಲ್ಲಿ ಸಂಬಂಧಿಸಿದ ನೌಕರರು ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲೆ, ಮರಣ ಪ್ರಮಾಣ ಪತ್ರ ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ವಂಶವೃಕ್ಷದ ಪ್ರತಿಗಳನ್ನು ಲಗತ್ತಿಸುವುದು.	
18	ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ತರು ಅಥವಾ ಅವರ ಕುಟುಂಬದ ಸದಸ್ಯರಾಗಿದ್ದಲ್ಲಿ (ಗಂಡ, ಹೆಂಡತಿ, ಮಗ/ಮಗಳು) ಗುರುತಿನ ಚೀಟಿ ಮತ್ತು ಸಕ್ಷಮ ಪ್ರಾಧಿಕಾರದಿಂದ ಪಡೆದ ವಂಶವೃಕ್ಷದ ಪ್ರತಿಗಳನ್ನು ಲಗತ್ತಿಸುವುದು.	

ದಿನಾಂಕ:

ಸ್ಥಳ: **ಅಭ್ಯರ್ಥಿಯ ಸಹಿ**

ಸೂಚನೆ:

1. ಅಭ್ಯರ್ಥಿಗಳ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.
2. ಅರ್ಜಿಯೊಂದಿಗೆ ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ಪೌರಾಯುಕ್ತರ ದೃಢೀಕರಣದೊಂದಿಗೆ ಸಲ್ಲಿಸುವುದು.
3. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಆಯಾ ನಗರಸಭೆಗಳಿಗೆ ಮಾತ್ರ ಅರ್ಜಿ ಸಲ್ಲಿಸುವುದು.
4. ಅವಶ್ಯವಿದ್ದಲ್ಲಿ ಕೋರಲಾಗುವ ಇತರೆ ಹೆಚ್ಚುವರಿ ದಾಖಲಾತಿಗಳನ್ನು ಸಲ್ಲಿಸುವುದು.

For more job news visit : www.kpscvaani.com

ಬೆಂಗಳೂರು ದಕ್ಷಿಣ ಜಿಲ್ಲೆ_____ ನಗರಸಭೆಯ ನೇರಪಾವತಿ ಪೌರಕಾರ್ಮಿಕರ ಹುದ್ದೆಯ ನೇಮಕಾತಿಗೆ ಸಲ್ಲಿಸಲಾದ ಅರ್ಜಿಯ ದಾಖಲಾತಿಗಳ ಚೆಕ್ ಲಿಸ್ಟ್.

ಅರ್ಜಿದಾರರ ಹೆಸರು	
ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಧಾನ ದಿನಗೂಲಿ/ಗುತ್ತಿಗೆ/ ಹೊರಗುತ್ತಿಗೆ.	
ಹಾಲಿ ಕಾರ್ಯನಿರ್ವಹಿಸುತ್ತಿರುವ/ಕಾರ್ಯನಿರ್ವಹಿಸಿದ್ದ ಹುದ್ದೆ ಪೌರಕಾರ್ಮಿಕರು, ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲಿನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕ.	

ಕ್ರ.ಸ	**ದಾಖಲಾತಿ ವಿಧ**	**ಲಗತ್ತಿಸಿದೆ / ಲಗತ್ತಿಸಿಲ್ಲ**
1	ಭರ್ತಿ ಮಾಡಿದ ಅರ್ಜಿ ನಮೂನೆ	
2	ವಯಸ್ಸಿಗೆ ಸಂಬಂಧಪಟ್ಟಂತೆ ಅಧಿಕೃತ ದಾಖಲಾತಿಗಳು ಜನನ ಪ್ರಮಾಣ ಪತ್ರ/ ಆಧಾರ್‌ಕಾರ್ಡ್/ಮತದಾರರ ಗುರುತಿನ ಚೀಟಿ/ ಶೈಕ್ಷಣಿಕ ದಾಖಲಾತಿಗಳು	
3	ಇ.ಎಸ್.ಐ / ಪಿ.ಎಫ್ ದಾಖಲಾತಿ ಪ್ರತಿ (ಪೌರಾಯುಕ್ತರು ದೃಢೀಕರಿಸಿರುವ)	
4	ವೇತನ ಪಾವತಿಸಿರುವ & ಹಾಜರಾತಿ ದಾಖಲಾತಿ ಪ್ರತಿ (ಪೌರಾಯುಕ್ತರು ದೃಢೀಕರಿಸಿರುವ)	
5	ದೈಹಿಕವಾಗಿ ಹಾಗೂ ಮಾನಸಿಕವಾಗಿ ಅರ್ಹರಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ (ಸರ್ಕಾರಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದಿರುವುದು)	
6	ಕನ್ನಡ ಭಾಷೆ ಮಾತನಾಡಲು ಬರುವ ಸ್ವಯಂ ಘೋಷಣಾ ಪ್ರತಿ.	
7	ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಮರಣ ಹೊಂದಿದ ಪೌರಕಾರ್ಮಿಕರು ಎಂಬ ಬಗ್ಗೆ ಪೌರಾಯುಕ್ತರು ನೀಡಿರುವ ದೃಢೀಕರಣದ ಪತ್ರ, ಮರಣ ಪ್ರಮಾಣ ಪತ್ರ ಹಾಗೂ ಕುಟುಂಬದ ಸದಸ್ಯರಾಗಿದ್ದಲ್ಲಿ ವಂಶವೃಕ್ಷದ ದಾಖಲೆ	
8	ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಧಿನಿಯಮ ದಡಿ ಗುರುತಿಸಲ್ಪಟ್ಟ ಸಂತ್ರಸ್ಥರ ಗುರುತಿನ ಚೀಟಿ ಹಾಗೂ ಕುಟುಂಬದ ಸದಸ್ಯರಾಗಿದ್ದಲ್ಲಿ ವಂಶವೃಕ್ಷದ ದಾಖಲೆ	

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ

For more job news visit : www.kpscvaani.com

ನೇರಪಾವತಿ ಪೌರಕಾರ್ಮಿಕರ ನೇಮಕಾತಿಗಾಗಿ ದೃಢೀಕರಣ ಪತ್ರ

ಶ್ರೀ/ಶ್ರೀಮತಿ/ಕುಮಾರಿ _____ ಬಿನ್/ಕೋಂ _____ ರವರು ದಿನಾಂಕ: _____ ರಿಂದ ದಿನಾಂಕ: _____ ರವರೆಗೆ ಕನಿಷ್ಠ ಒಂದು ವರ್ಷ (ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲಿನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕ) _____ ಹುದ್ದೆಯಲ್ಲಿ, (ಗುತ್ತಿಗೆ/ಹೊರಗುತ್ತಿಗೆ/ದಿನಗೂಲಿ) _____ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುತ್ತಾರೆ. ಸದರಿ ಅರ್ಜಿದಾರರು ಅರ್ಜಿಯಲ್ಲಿ ಒದಗಿಸಿದ ದಾಖಲೆ/ಮಾಹಿತಿಯನ್ನು ಕಛೇರಿ ದಾಖಲೆಗಳೊಂದಿಗೆ ಪರಿಶೀಲಿಸಿದ್ದು, ಸದರಿರವರು ನೀಡಿರುವ ದಾಖಲೆ/ಮಾಹಿತಿಯು ಸರಿ ಇರುತ್ತವೆ ಎಂದು ದೃಢೀಕರಿಸಿದೆ.

ಹಿರಿಯ/ಕಿರಿಯ,
ಆರೋಗ್ಯ ನಿರೀಕ್ಷಕರು
_____, ನಗರಸಭೆ.

ಪರಿಸರ ಅಭಿಯಂತರರು /
ಸ. ಕಾ. ಅ (ಪರಿಸರ)
_____, ನಗರಸಭೆ.

ಪೌರಾಯುಕ್ತರು
_____, ನಗರಸಭೆ.

For more job news visit : www.kpscvaani.com

ನೇರಪಾವತಿ ಪೌರಕಾರ್ಮಿಕರ ನೇಮಕಾತಿಗಾಗಿ ದೃಢೀಕರಣ ಪತ್ರ

ಅರ್ಜಿದಾರರಾದ ಶ್ರೀ/ಶ್ರೀಮತಿ/ಕುಮಾರಿ _____ ಬಿನ್/ಕೋಂ _____ ರವರು ನಗರಸಭೆಯಲ್ಲಿ ಹೊರಗುತ್ತಿಗೆ/ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ _____ ಪೌರಕಾರ್ಮಿಕರ ಗಂಡ/ಹೆಂಡತಿ/ಮಗ/ಮಗಳು ಆಗಿರುತ್ತಾರೆ. ಸದರಿ ಅರ್ಜಿದಾರರು ಅರ್ಜಿಯಲ್ಲಿ ಒದಗಿಸಿದ ದಾಖಲೆ/ಮಾಹಿತಿಯನ್ನು ಕಛೇರಿ ದಾಖಲೆಗಳೊಂದಿಗೆ ಪರಿಶೀಲಿಸಿದ್ದು, ಸದರಿರವರು ನೀಡಿರುವ ದಾಖಲೆ/ಮಾಹಿತಿಯು ಸರಿ ಇರುತ್ತವೆ ಎಂದು ದೃಢೀಕರಿಸಿದೆ.

ಹಿರಿಯ/ಕಿರಿಯ,
ಆರೋಗ್ಯ ನಿರೀಕ್ಷಕರು
_____, ನಗರಸಭೆ.

ಪರಿಸರ ಅಭಿಯಂತರರು /
ಸ. ಕಾ. ಅ (ಪರಿಸರ)
_____, ನಗರಸಭೆ.

ಪೌರಾಯುಕ್ತರು
_____, ನಗರಸಭೆ.

For more job news visit : www.kpscvaani.com

ನೇರಪಾವತಿ ಪೌರಕಾರ್ಮಿಕರ ನೇಮಕಾತಿಗಾಗಿ ದೃಢೀಕರಣ ಪತ್ರ

ಅರ್ಜಿದಾರರಾದ ಶ್ರೀ/ಶ್ರೀಮತಿ/ಕುಮಾರಿ _____ ಬಿನ್/ಕೋಂ _____ ರವರು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ತರಾಗಿರುತ್ತಾರೆ.

ಅಥವಾ

ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ಗುರುತಿಸಲ್ಪಟ್ಟ ಸಂತ್ರಸ್ತರಾದ ಶ್ರೀ/ಶ್ರೀಮತಿ/ಕುಮಾರಿ_____ ರವರ ಗಂಡ/ಹೆಂಡತಿ/ಮಗ/ಮಗಳು ಆಗಿರುತ್ತಾರೆ.

ಸದರಿ ಅರ್ಜಿದಾರರು ಅರ್ಜಿಯಲ್ಲಿ ಒದಗಿಸಿದ ದಾಖಲೆ/ಮಾಹಿತಿಯನ್ನು ಕಛೇರಿ ದಾಖಲೆಗಳೊಂದಿಗೆ ಪರಿಶೀಲಿಸಿದ್ದು, ಸದರಿರವರು ನೀಡಿರುವ ದಾಖಲೆ/ಮಾಹಿತಿಯು ಸರಿ ಇರುತ್ತವೆ ಎಂದು ದೃಢೀಕರಿಸಿದೆ.

ಹಿರಿಯ/ಕಿರಿಯ,
ಆರೋಗ್ಯ ನಿರೀಕ್ಷಕರು
_____, ನಗರಸಭೆ.

ಪರಿಸರ ಅಭಿಯಂತರರು /
ಸ. ಕಾ. ಅ (ಪರಿಸರ)
_____, ನಗರಸಭೆ.

ಪೌರಾಯುಕ್ತರು
_____, ನಗರಸಭೆ.